

ಉರುಟಾದ ಬೇಲದ ಹಣ್ಣು

## ಪೂಜೆಗೂ, ಆರೋಗ್ಯಕ್ಕೂ

# ಬೇಲದ ಹಣ್ಣು

■ ನಾ. ಕಾರಂತ ಪೆರಾಜೆ



ಹಣ್ಣಿನ ಗುಳ

ಬೆಂಗಳೂರು ಹೊರವಲಯದ ಹಾರೋಹಳ್ಳಿಯ ಚಿಕ್ಕೇರಿದೊಡ್ಡಿ ಉಮಾಶಂಕರ್ ಮನೆಯಂಗಳದಲ್ಲಿದ್ದೆ. ಸನಿಹದಲ್ಲಿ ದೇವಸ್ಥಾನ. ನಗರದಿಂದ ಇಲ್ಲಿಗೆ ಬರುವ ಭಕ್ತರಲ್ಲಿ ಅನೇಕರು ಉಮಾಶಂಕರರ ಮನೆಗೆ ಬಂದೇ ಬರುತ್ತಾರೆ. ಏನು ಕಾರಣ? ಇವರ ಮನೆಯಂಗಳದಲ್ಲಿ ಬೇಲದ ಮರವಿದೆ. ದೇವರಿಗೆ ಸಮರ್ಪಣೆಗಾಗಿ ತಾಜಾ ಬೇಲದ ಹಣ್ಣಿಗಾಗಿ ಬರುತ್ತಾರೆ, ಖರೀದಿಸಿ ಒಯ್ಯುತ್ತಾರೆ.

ಒಂದೇ ಮರ. ವರುಷಕ್ಕೆ ಏನಿಲ್ಲವೆಂದರೂ ನಿರಾಯಾಸವಾಗಿ ನಾಲ್ಕೈದು ಸಾವಿರ ಗಳಿಸಿ ಕೊಡುತ್ತದೆ ಎಂಬ ಸಂತೋಷದಲ್ಲಿ ಉಮಾಶಂಕರ್ ಬೇಲದ ಹಣ್ಣಿನ ಜ್ಯೂಸ್ ತಂದಿಟ್ಟರು. ಆಹಾ.. ಏನು ಸ್ವಾದ! ಜತೆಗೆ ತಿನ್ನಲು ಹಣ್ಣಿನ ಗುಳಕ್ಕೆ ಬೆಲ್ಲ ಮತ್ತು ಏಲಕ್ಕಿ ಬೆರೆಸಿದ ಪಾಕ.

(8ನೇ ಪುಟ ನೋಡಿ)